**O.S.No.136/2008**
**DW-1**

**ದಿಃ 28.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಕೆ ವಕೀಲರಿಂದ ಃ**

ಅನಂತಯ್ಯ ಹಾಗೂ ಈರಮ್ಮನಿಗೆ ಎಷ್ಟು ಜನ ಮಕ್ಕಳೆಂದು ಗೊತ್ತಿಲ್ಲ. ಈರಮ್ಮ ನನ್ನ ತಾಯಿ. ಅನಂತಯ್ಯ ನನ್ನ ತಂದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಚಿಕ್ಕರಂಗಪ್ಪ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ನನ್ನ ತಾಯಿ ಈರಮ್ಮ ಹಾಗೂ ತಂದೆ ಚಿಕ್ಕರಂಗಪ್ಪನವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ದಾವಾ ಸ್ವತ್ತು ಮೂಲತಃ ರಂಗಪ್ಪನವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಚಿಕ್ಕರಂಪ್ಪನವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಚಿಕ್ಕರಂಗಪ್ಪನವರ ತಂದೆಯ ಹೆಸರು ತಿಮ್ಮಯ್ಯ. ತಿಮ್ಮಯ್ಯನವರ ತಂದೆಯ ಹೆಸರು ರಂಗಪ್ಪ.

ರಂಗಪ್ಪನವರಿಗೆ ಚಿಕ್ಕದಾಸಪ್ಪ ಹಾಗೂ ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯ ಎನ್ನುವ ಇಬ್ಬರು ಮಕ್ಕಳಿದ್ದರು ಎಂದರೆ ಸರಿ. ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯ ಸಣ್ಣ ವಯಸ್ಸಿನಲ್ಲಿಯೇ ತೀರಿಕೊಂಡ ಕಾರಣ ತಿಮ್ಮಯ್ಯನ ಮಗನನ್ನು ಅವರ ಅಣ್ಣ ಚಿಕ್ಕದಾಸಪ್ಪನವರೇ ಸಾಕಿರುತ್ತಾರೆಂದರೆ ಗೊತ್ತಿಲ್ಲ. ಚಿಕ್ಕದಾಸಪ್ಪ ತಿಮ್ಮಯ್ಯನ ಭಾಗದ ಜಮೀನನ್ನು ತಿಮ್ಮಯ್ಯನ ಮಗನಾದ ಚಿಕ್ಕರಂಗಪ್ಪನವರಿಗೆ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ದಾನವಾಗಿ ಕೊಟ್ಟಿದ್ದಾರೆಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಚಿಕ್ಕದಾಸಪ್ಪ ಚಿಕ್ಕರಂಗಪ್ಪನಿಗೆ ಯಾವುದೇ ದಾನಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ವಾದಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಸ್ವತ್ತು ಚಿಕ್ಕರಂಗಪ್ಪನ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-12 ನನ್ನ ತಾಯಿಯ ಹೆಸರಿಗೆ ವಾದಿ ಮಾಡಿಕೊಟ್ಟಿರುತ್ತಾರೆ. ನಿಡಿ-12 ಪಂಚಾಯಿತಿಯಲ್ಲಿ ಬರೆದು ಕೊಟ್ಟ ಹಕ್ಕು ಪತ್ರವಾಗಿರುತ್ತದೆ. ನಿಡಿ-12 ನೊಂದಾಯಿಸಿಲ್ಲ ಎಂದರೆ ಸರಿ. ನಿಪಿ-12 ನ್ನು ನೊಂದಾಯಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-12 ನ್ನು ಸೃಷ್ಟಿಸಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-12 ಕ್ಕೆ ತಿಮ್ಮಯ್ಯ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-12ಕ್ಕೂ ವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಡಿ-12 ರಲ್ಲಿ ತೋರಿಸಿದ ಹಣವನ್ನು ತಿಮ್ಮಯ್ಯನವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಪಂಚಾಯಿತಿಯಲ್ಲಿ ಜಮೀನು ನಮ್ಮಿಬ್ಬರ ಭಾಗಕ್ಕೂ ಮಾಡಿದ್ದರು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**